ಶ್ರೀ ಡಿ.ವಿ. ಸದಾನಂದಗೌಡ:- ಅದನ್ನು ಕ್ಲಾರಿಫೈ ಮಾಡಿಬಿಡುತ್ತೇನೆ. ಚಿನ್ನಬೆಳ್ಳಿಯ ಅಂಗಡಿಯ ಮಾಲೀಕರು ಯಾರಿದ್ದಾರೆ ಅವರು ಇಂಥ ಕೆಲಸಗಾರರನ್ನು ಇಟ್ಟುಕೊಂಡು ಕೆಲಸ ಮಾಡಿಸುವಂಥದ್ದು. ಬೀಡಿ ಕಾರ್ಮಿಕರಿದ್ದಾರಲ್ಲಾ ಅವರನ್ನು ದಕ್ಷಿಣ ಕನ್ನಡದಲ್ಲಿ ಕೆಲಸಕ್ಕೆ ಇಟ್ಟುಕೊಂಡು ಕೆಲಸ ಮಾಡಿಸುತ್ತಾರೆ. ತಮಗೆ ಇದು ಗೊತ್ತಿರಬಹುದು. ಏಕೆಂದರೆ ತಾವು ಅಲ್ಲಿಗೆ ಬಂದು ಚಿನ್ನ ಬೆಳ್ಳಿ ಪದಾರ್ಥಗಳನ್ನು ತೆಗೆದುಕೊಳ್ಳುವುದನ್ನು ನಾನು ನೋಡಿದ್ದೇನೆ. ತಮಗೂ ಇದು ಗೊತ್ತಿರಬಹುದು.

ಶ್ರೀ ಸಿ.ಆರ್. ಸಗೀರ್ ಅಹಮದ್:- ನನ್ನ ವಿರುದ್ಧ ಲೋಕಾಯುಕ್ತದವರಿಗೇನಾದರೂ ಬರೆಯಬೇಕೆಂದು ಆಲೋಚನೆ ಮಾಡಿದ್ದೀರಾ?

ಶ್ರೀ ಡಿ.ವಿ. ಸದಾನಂದಗೌಡ:- ಹಾಗೇನಿಲ್ಲ.

ಶ್ರೀ ಸಿ.ಆರ್. ಸಗೀರ್ ಅಹಮದ್:- ಹಾಗಾದರೆ ನಾನು ದಕ್ಷಿಣ ಕನ್ನಡಕ್ಕೆ ಬಂದು ಚಿನ್ನ ಬೆಳ್ಳಿ ಖರೀದಿ ಮಾಡಿದ್ದನ್ನು ಯಾವಾಗ ನೋಡಿದ್ದೀರಿ?

ಶ್ರೀ ಡಿ.ವಿ. ಸದಾನಂದಗೌಡ:- ಹಾಗಲ್ಲ. ವಾಸ್ತವಿಕವಾಗಿ ಚಿನ್ನ ಬೆಳ್ಳಿ ಅಂಗಡಿಯವರು ಇಂಥವನ್ನು ಕೆಲಸಕ್ಕೆ ಇಟ್ಟುಕೊಂಡು ಕೆಲಸ ಮಾಡಿಸುವಂಥದ್ದು ಇದೆ. ಅಂಥವರೇ ತುಂಬಾ ಇರುವಂಥದ್ದು.

ಶ್ರೀ ಸಿ.ಆರ್. ಸಗೀರ್ ಅಹಮದ್:- 22 ಕ್ಯಾರೇಟ್ ಚಿನ್ನವು ಎಲ್ಲೋ ಕಾರ್ಖಾನೆಗಳಲ್ಲಿ ತಯಾರಾಗಿ ಮಾರಾಟವಾಗುತ್ತಿರುವುದರಿಂದ ಈ ಕೆಲಸಗಾರರಿಗೆ ತೊಂದರೆಯಾಗಿದೆ. ತಮಗೆ ಗೊತ್ತಿರುವಂತೆ ಚಿನ್ನದ ಮೇಲೆ ರಾಜ್ಯ ಸರ್ಕಾರಕ್ಕೆ ಯಾವುದೇ ಕಂಟ್ರೋಲ್ ಇಲ್ಲ. ಆದ್ದರಿಂದ ಇದು ಕೇಂದ್ರ ಸರ್ಕಾರಕ್ಕೆ ಬಿಟ್ಟಿರುವ ವಿಚಾರವಾಗಿರುತ್ತದೆ. ಈ ವಿಚಾರ ಈಗಾಗಲೇ ಸರ್ಕಾರದ ಗಮನಕ್ಕೆ ಬಂತು. ಅನ್ ರೆಕಗ್ನೈಸ್ಡ್ ಸೆಕ್ಟಾರ್‌ನಲ್ಲಿ ಯಾರ್ಯಾರು ಕೆಲಸ ಮಾಡುತ್ತಿದ್ದಾರೆ. ಅವರಿಗೆ ಬೇಕಾದಂಥ ಒಂದು ಮಸೂದೆಯನ್ನು ಮಂಡನೆ ಮಾಡುವುದರ ಬಗ್ಗೆ ಕಾರ್ಮಿಕ ಇಲಾಖೆ ಈಗಾಗಲೇ ಸಿದ್ಧತೆಯನ್ನು ಮಾಡಿಕೊಂಡಿದೆ. ಈ ತಿಂಗಳ 31ರವರೆಗೆ ಏನು ಅಧಿವೇಶನ ನಡೆಯುತ್ತದೆ ಈ ಅವಧಿಯಲ್ಲೇ ಆ ಮಸೂದೆಯನ್ನು ಮಂಡನೆ ಮಾಡುತ್ತಿದ್ದೇವೆ. ಇವರುಗಳನ್ನೂ ಆ ಹೊಸ ಮಸೂದೆಯಲ್ಲಿ ಸೇರಿಸಿಕೊಂಡು ಇವರ ಹಿತವನ್ನು ಕಾಪಾಡುತ್ತೇವೆಂದು ಮಾನ್ಯ ಅಧ್ಯಕ್ಷರ ಮೂಲಕ ಮಾನ್ಯ ಸದಸ್ಯರ ಗಮನಕ್ಕೆ ತರಬಯಸುತ್ತೇನೆ.

ಮೈಸೂರು ಸಕ್ಕರೆ ಕಾರ್ಖಾನೆಯಿಂದ ಹೊರಬರುತ್ತಿರುವ ಕಾರ್ಬನ್‌ಯುಕ್ತ ಕರಿಧೂಳು

150 (1320) ಶ್ರೀ ರಾಮದಾಸ್ ಎ.(ಕೃಷ್ಣರಾಜ) : ಮಾನ್ಯ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

1) ಮೈಸೂರು ಸಕ್ಕರೆ ಕಾರ್ಖಾನೆಯಿಂದ ಹೊರಬರುತ್ತಿರುವ ಕಾರ್ಬನ್‌ಯುಕ್ತ ಕರಿಧೂಳಿನಿಂದ ಸುತ್ತಮುತ್ತಲ ಪ್ರದೇಶದಲ್ಲಿ ವಾಸ ಮಾಡುತ್ತಿರುವವರಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

2) ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿಯು ಈ ಕಾರ್ಖಾನೆಗೆ ಕರಿಧೂಳನ್ನು ನಿಯಂತ್ರಿಸುವಂತೆ ಆದೇಶ ನೀಡಿದೆಯೇ?

3) ಕಾರ್ಖಾನೆಯವರು ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿಯ ಆದೇಶವನ್ನು ಪಾಲಿಸಿದ್ದಾರೆಯೇ; ಇಲ್ಲದಿದ್ದಲ್ಲಿ ಕಾರ್ಖಾನೆ ವಿರುದ್ಧ ಕೈಗೊಂಡಿರುವ ಕ್ರಮವೇನು?

ಶ್ರೀ ಕೆ.ಹೆಚ್. ರಂಗನಾಥ್(ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು):

1) ಹೌದು

2) ಹೌದು

3) ಇಲ್ಲ.

ಮಂಡಳಿ ವಾಯು (ಮಾಲಿನ್ಯ ನಿವಾರಣೆ ಮತ್ತು ನಿಯಂತ್ರಣ) ಕಾಯ್ದೆ 1981ರ ಅಡಿಯಲ್ಲಿ 2001-02 ಮತ್ತು 2002-03ನೇ ಸಾಲಿನ ಸಮ್ಮತಿ ಪತ್ರ ನೀಡುವುದನ್ನು ನಿರಾಕರಿಸಿರುತ್ತದೆ. ಉದ್ದಿಮೆದಾರರು ಸಲ್ಲಿಸಿರುವ ಮನವಿ ಮೇಲ್ಮನವಿ ಪ್ರಾಧಿಕಾರದ ಮುಂದೆ ಇದೆ.

ಶ್ರೀ ಎ. ರಾಮದಾಸ್:- ಮಾನ್ಯ ಅಧ್ಯಕ್ಷರೆ, ಮೈಸೂರು ಸಕ್ಕರೆ ಕಾರ್ಖಾನೆಯ ಬಗೆಗಿನ ಎಲ್ಲ ಪ್ರಶ್ನೆಗಳಿಗೂ ಉತ್ತರವಾಗಿ ಸರ್ಕಾರದ ಗಮನಕ್ಕೆ ಬಂದಿದೆಯೆಂದು ಮಾನ್ಯ ಸಚಿವರು ಹೇಳಿದ್ದಾರೆ. ನಿರಂತರವಾಗಿ ನಾಲ್ಕು ವರ್ಷಗಳ ಕಾಲದಿಂದಲೂ, ಮೈಸೂರು ಸಕ್ಕರೆ ಕಾರ್ಖಾನೆಯು ಸುತ್ತಮುತ್ತಲಿನ ಪ್ರದೇಶದಲ್ಲಿ ಜನರು ಬದುಕಲು ಸಾಧ್ಯವಿಲ್ಲ ಎಂಬ ವಿಚಾರವನ್ನು ಸರ್ಕಾರದ ಗಮನಕ್ಕೆ ತಂದರೂ ಕೂಡ ಸರ್ಕಾರದ ಕ್ರಮ ಏನಾಗಿದೆಯೆಂದರೆ, 2001-02, 2002-03ನೇ ಸಾಲಿನಲ್ಲಿ ನೀಡಿದ್ದಂಥ ಸಮ್ಮತಿ ಪತ್ರವನ್ನು ಮಾತ್ರ ನಿರಾಕರಿಸಲಾಗಿದೆ. ಅಂದರೆ ಇದರಿಂದ ಸಮಸ್ಯೆ ಬಗೆಹರಿದಂತಾಯಿತೇ? ಇದು ಕೇವಲ ಮೈಸೂರು ಸಕ್ಕರೆ ಕಾರ್ಖಾನೆಗೆ ಸಂಬಂಧಪಟ್ಟಿದ್ದಲ್ಲ, ಇಡೀ ರಾಜ್ಯದಲ್ಲಿರುವ ಸಕ್ಕರೆ ಕಾರ್ಖಾನೆಗಳ ಸುತ್ತಮುತ್ತಲಿರುವ ಪ್ರದೇಶಗಳಲ್ಲಿ ಜನಸಾಮಾನ್ಯರು ಬದುಕಲು ಕಷ್ಟವಾಗಿರುವುದು ಮಾತ್ರವಲ್ಲ, ಗಾಳಿ ಮತ್ತು ನೀರಿನ ಮಾಲಿನ್ಯದಿಂದಾಗಿ ಜನರು ನರಳುತ್ತಿರುವ ಸಂದರ್ಭದಲ್ಲಿ ಸರ್ಕಾರ ಇದಕ್ಕೆ ಪರಿಹಾರವನ್ನು ಯಾವ ರೀತಿಯಲ್ಲಿ ಹುಡುಕುವ ಕೆಲಸವನ್ನು ಮಾಡಿದೆ ಎಂಬುದನ್ನು ಮಾನ್ಯ ಸಚಿವರಿಂದ ಕೇಳಬಯಸುತ್ತೇನೆ.

ಶ್ರೀ ಕೆ.ಹೆಚ್. ರಂಗನಾಥ್:- ಮಾನ್ಯ ಅಧ್ಯಕ್ಷರೆ, 1998 ರಿಂದ 2002ರವರೆಗೆ ಸುಮಾರು 17 ಸಾರಿ ಇದರ ಬಗ್ಗೆ ಇನ್ಸ್‌ಪೆಕ್ಷನ್ ಮಾಡಲಾಗಿದೆ. ಅವರಿಗೆ ಆ ಕನ್‌ಸೆಂಟ್ ಕಂಡೀಷನ್‌ಗಳು ಇರುತ್ತವೆ. ಅದನ್ನು ಫುಲ್‌ಫಿಲ್ ಮಾಡಬೇಕೆಂದು ಆದೇಶ ಕೊಟ್ಟಿದೆ. ಅದನ್ನು ಮಾಡದಿರುವುದಕ್ಕೆ ಕ್ರಿಮಿನಲ್ ಕೇಸನ್ನೂ ಹಾಕಲಾಗಿತ್ತು. ಇಷ್ಟಲ್ಲದೆ ಆ ಇಲಾಖೆಗೆ ಬೇರೆ ಏನನ್ನೂ ಮಾಡಲು ಅಧಿಕಾರವಿರುವುದಿಲ್ಲ.

ಶ್ರೀ ಎ.ರಾಮದಾಸ್:- ಮಾನ್ಯ ಅಧ್ಯಕ್ಷರೇ, ತಾವೇ ನಮ್ಮ ರಕ್ಷಣೆಗೆ ಬರಬೇಕು.ಅಲ್ಲಿ ಸಕ್ಕರೆ ಕಾರ್ಖಾನೆಯನ್ನು ಪ್ರಾರಂಭ ಮಾಡಿರುವುದರಿಂದ ಸುತ್ತಮುತ್ತಲಿರುವ ಜನರಿಗೆ ಗಾಳಿ ಮತ್ತು ನೀರಿನ ಮಾಲಿನ್ಯವಾಗುತ್ತಿರುವುದು ಅವರೇ ಹೇಳಿರುವಂತೆ ನಿಜವಾಗಿದೆ. 17 ಬಾರಿ ಈ ಸಮಸ್ಯೆಗಳು ಸರ್ಕಾರದ ಗಮನಕ್ಕೆ ಬಂದಮೇಲೆ ಅದಕ್ಕೆ ಸಂಬಂಧಪಟ್ಟಂತೆ ಸರ್ಕಾರಕ್ಕೆ ಕೇವಲ ನೋಟೀಸ್ ಕೊಡುವ ಅಧಿಕಾರ ಇರುವುದಾದರೆ ಪರಿಹಾರ ಹುಡುಕುವವರು ಯಾರು? ಈ ಸದನ ತಾನೇ? ಹಾಗಾದರೆ ಮಾನ್ಯ ಅಧ್ಯಕ್ಷರೇ, ತಾವೇ ನಮ್ಮ ರಕ್ಷಣೆಗೆ ಬರಬೇಕು. ತಾವು ರಕ್ಷಣೆ ಕೊಡದಿದ್ದರೆ ಜನಸಾಮಾನ್ಯರಿಗೆ ಯಾರು ರಕ್ಷಣೆ ಕೊಡುತ್ತಾರೆ? ಯಾವ ಇಲಾಖೆ ರಕ್ಷಣೆ ಕೊಡುತ್ತದೆ? ಪರಿಸರ ಇಲಾಖೆಯಲ್ಲದೆ ಇನ್ನಾವ ಇಲಾಖೆ ರಕ್ಷಣೆ ಕೊಡುತ್ತದೆ? ಇದು ಬಹಳ ಮಹತ್ವವಾದ ವಿಚಾರ. ಯಾವ ಇಲಾಖೆ ಯಾರು ಇದರ ಬಗ್ಗೆ ಕ್ರಮ ಕೈಗೊಳ್ಳಬೇಕು?

ಶ್ರೀ ಕೆ.ಹೆಚ್. ರಂಗನಾಥ್:- ನನಗೂ ಇಲ್ಲಿ ಶಬ್ದ ಮಾಲಿನ್ಯವಾಗುತ್ತಿದೆ. ಹೀಗಿರುವಾಗ ನಾನು ತಮಗೆ ಹೇಗೆ ಪರಿಹಾರ ಕೊಡುವುದು? ಮಾನ್ಯ ಸದಸ್ಯರೇನೂ ಕಡಿಮೆ ಮಾತನಾಡುತ್ತಿಲ್ಲ.

ಆದರಿಂದ ನನಗೂ ಶಬ್ದ ಮಾಲಿನ್ಯವಾಗುತ್ತಿದೆ. ಈ ಪ್ರಶ್ನೆ ಯಾರದ್ದು ಎಂದು ನೋಡಿದೆ, 'ರಾಮದಾಸ್' ಎಂದು ಇತ್ತು. ಆದ್ದರಿಂದ ನಾನು ಇವತ್ತು ಕೆಲವು ನಿಮಿಷಗಳ ಕಾಲ ಶಬ್ದ ಮಾಲಿನ್ಯವನ್ನು ಅನುಭವಿಸಬೇಕಾಗುತ್ತದೆಂದು ಮೊದಲೇ ತಯಾರಾಗಿ ಬಂದುಬಿಟ್ಟೆ. ಇದಕ್ಕೆ ಕ್ರಮ ತೆಗೆದುಕೊಂಡಿದ್ದಾರೆ. ಮೈಸೂರು ಸಕ್ಕರೆ ಕಾರ್ಖಾನೆಯವರಿಗೆ ಕೋ-ಜನರೇಷನ್ ಮಾಡಲು ಅವಕಾಶ ಕೊಡಲಾಗಿದೆ. ಅದನ್ನು ಮಾಡಬೇಕಾದರೆ ಬೇರೆ ಯಂತ್ರಗಳನ್ನು ತಂದು ಹಾಕಬೇಕಾಗುತ್ತದೆ. ಅದಕ್ಕೆ ಸುಮಾರು ಹಣ ಖರ್ಚಾಗುತ್ತದೆ. ಮೈಸೂರು ಸಕ್ಕರೆ ಕಾರ್ಖಾನೆ ಹಣಕಾಸಿನ ದೃಷ್ಟಿಯಿಂದ ಬಹಳ ಚೆನ್ನಾಗಿದೆಯೆಂದು ತಾವ್ಯಾರೂ ಭಾವಿಸಬಾರದು. ಮಾನ್ಯ ಸದಸ್ಯರಿಗೂ ಅದು ಗೊತ್ತಿರುವ ವಿಚಾರ. ಆದ್ದರಿಂದ ಅಲ್ಲಿ ಕೋ-ಜನರೇಷನ್ ಕೆಲಸ ಮಾಡುತ್ತಿದ್ದಾರೆ, 2003ನೇ ಮೇ ತಿಂಗಳ ಒಳಗಾಗಿ ಇದಕ್ಕೆ ಉತ್ತಮವಾಗಿರತಕ್ಕ ಅವಕಾಶವಾಗುತ್ತದೆ. ಮತ್ತು ಈ ಪರಿಹಾರವಾಗುತ್ತದೆ.

ಶ್ರೀ ಎ.ರಾಮದಾಸ್:- ಈ ಇಲಾಖೆಯನ್ನು ಹೊತ್ತಿರತಕ್ಕಂಥ ಹಿರಿಯರಾದ ತಮ್ಮಿಂದ ಜನ ಬಹಳಷ್ಟು ನಿರೀಕ್ಷಣೆ ಮಾಡುತ್ತಿದ್ದಾರೆ. ಕಾರ್ಖಾನೆಗಳಿಗೆ ಇರತಕ್ಕಂಥ ಕಾನೂನಿಗೆ ತಿದ್ದು ಪಡಿತರತಕ್ಕದ್ದಾಗಲಿ, ಮತ್ತೊಂದಾಗಲಿ, ಅವರು ಹೇಳಿದ್ದನ್ನು ಇಲ್ಲ ಎಂದು ಹೇಳುತ್ತಿಲ್ಲ. ಪಲ್ಯೂಷನ್ ಇಲಾಖೆಯಿಂದ ಕೇವಲ ನೋಟೀಸನ್ನು ಕೊಟ್ಟು ಅದನ್ನು ಮಾಡಿ ಎಂದು ಹೇಳುವುದರ ಬದಲಾಗಿ ಸರ್ಕಾರ ಯಾವುದಾದರೊಂದು ತಿದ್ದುಪಡಿಯನ್ನು ತಂದು ಇದಕ್ಕೆ ಸಂಬಂಧಪಟ್ಟಂತೆ ವಿಶೇಷವಾಗಿ ನೀರು ಮತ್ತು ಗಾಳಿಯ ಮಾಲಿನ್ಯಕ್ಕೆ ಸಂಬಂಧಪಟ್ಟಂತೆ ಸಮಸ್ಯೆಗಳೇನು ನಿರ್ಮಾಣವಾಗುತ್ತಿದೆ. ಅದಕ್ಕೆ ಸರ್ಕಾರ ಏನಾದರೂ ರೆಸಲ್ಯೂಷನ್ ಮಾಡಿ ಬಿಲ್ಲನ್ನು ಮಂಡನೆ ಮಾಡಿ ಅಧಿಕಾರವನ್ನು ತೆಗೆದುಕೊಂಡು ಅದರ ಮೇಲೆ ನಿರ್ದಿಷ್ಟವಾದ ಕ್ರಮವನ್ನು ತೆಗೆದುಕೊಳ್ಳುವ ಕೆಲಸವನ್ನು ಮಾಡಬೇಕು. ಆ ಕೆಲಸವನ್ನು ಮಾನ್ಯ ಹಿರಿಯ ಮಂತ್ರಿಗಳಿಂದ ನಿರೀಕ್ಷಣೆ ಮಾಡುತ್ತಿದ್ದೇನೆ.

ಶ್ರೀ ಕೆ.ಹೆಚ್ ರಂಗನಾಥ್:- ಅಲ್ಲಿ ಮೂರು ಬಾಯ್ಲರ್ಸ್‌ಗಳಿವೆ. ಒಂದು 20 ಟನ್ ಪರ್ ಹವರ್ ಕೆಪಾಸಿಟಿಯದು. ಹೊಗೆಯೇನು ಮೇಲಿನಿಂದ ಬರುತ್ತದೆ ಅದರಲ್ಲಿ ಸಸ್ಪೆಂಡೆಡ್ ಪಾರ್ಟಿಕಲ್ಸ್ ಇರುತ್ತದೆ. ಅದು ಬಹಳ ಸೂಕ್ಷ್ಮವಾಗಿರತಕ್ಕದ್ದು. ಇವತ್ತು ಅದನ್ನು ಬದಲಾವಣೆ ಮಾಡಬೇಕಾಗುತ್ತದೆ. ಇನ್ನು ಎರಡು ಬಾಯ್ಲರ್‌ಗಳು ಕ್ರಮವಾಗಿ 40 ಟಿ.ಪಿ.ಹೆಚ್. ಮತ್ತು 12 ಟಿ.ಪಿ.ಹೆಚ್‌ಗಳದ್ದು. ಇದನ್ನು 1934ನೇ ಇಸವಿಯಲ್ಲಿ ಮಾಡಿರತಕ್ಕದ್ದು, ತುಂಬಾ ಹಳೆಯದಾಗಿದೆ. ಆದ್ದರಿಂದ ಇದನ್ನು ಬದಲಾವಣೆ ಮಾಡಬೇಕಾಗುತ್ತದೆ. ಈಗ ಹೊಸದಾಗಿ ಕೋ-ಜನರೇಷನ್ ಮಾಡಬೇಕಾಗಿರುವುದರಿಂದ ಒಂದೇ ಸಾರಿ ಯಂತ್ರಗಳನ್ನು ಹೊಸದಾಗಿ ಹಾಕಬೇಕೆಂದು ಪ್ರಯತ್ನ ಮಾಡುತ್ತಿದ್ದಾರೆ. ಅವರು ಇದು ಹೀಗೆಯೇ ಇರಬೇಕೆಂದು ಅನಾಧರಣೆ ಮಾಡುತ್ತಿಲ್ಲ. ಅದನ್ನು ಬದಲಾವಣೆ ಮಾಡುತ್ತಾರೆ. 2003ನೇ ಮೇ ನಲ್ಲಿ ಉತ್ತಮವಾದ ರೀತಿಯಲ್ಲಿ ಅನುಕೂಲವಾಗುತ್ತದೆಂದು ನಾನು ಆಗಲೇ ಹೇಳಿದೆ. ಅದರಿಂದ ನಮಗೆ ವಿದ್ಯುಚ್ಛಕ್ತಿ ಸಹ ಉತ್ಪಾದನೆಯಾಗುವುದಾಗುತ್ತದೆ. ಜೊತೆಗೆ ಮೊದಲೇನು ಕಬ್ಬನ್ನು ಅರೆಯುವ ಕೆಪಾಸಿಟಿ ಇತ್ತು ಅದು ಈಗ ಬದಲಾವಣೆಯಾಗಿದೆ. 5 ಸಾವಿರ ಟನ್ ಕೆಪಾಸಿಟಿ ಕಬ್ಬನ್ನು ಅರೆಯುವ ಸಾಮರ್ಥ್ಯದ ಯಂತ್ರಗಳು ಈಗ ಬಂದಿರುವುದರಿಂದ ಇನ್ನೂ ಅನುಕೂಲವಾಗುತ್ತದೆ. ಕೋ-ಜನರೇಷನ್ 2003ನೇ ಮೇ ತಿಂಗಳ ಕೊನೆಯಲ್ಲಿ ಆಗುತ್ತದೆ. ಮಾನ್ಯ ಸದಸ್ಯರ ಕಳಕಳಿ ಸರ್ಕಾರದ ಗಮನಕ್ಕೆ ಬಂದಿದೆ, ಬೋರ್ಡ್‌ನ ಗಮನಕ್ಕೂ ಬಂದಿದೆ. ಬೋರ್ಡ್‌ನ ಅಧಿಕಾರಿಗಳು

ನಿರ್ಲಕ್ಷತೆಯಿಂದಿದ್ದಾರೆಂದು ನಾನು ಹೇಳಲು ಬಯಸುವುದಿಲ್ಲ. ಅವರು ಕ್ರಮ ತೆಗೆದುಕೊಂಡಿದ್ದಾರೆ. ಅದಕ್ಕೆ ಬಹಳ ಹಣ ಬೇಕಾಗುತ್ತದೆ. ಎಷ್ಟು ಹಣ ಬೇಕಾಗುತ್ತದೆಂದು ನಾನು ಕೇಳಿದ್ದಕ್ಕೆ ಕೋಟಿಗಟ್ಟಲೆ ಹಣ ಬೇಕಾಗುತ್ತದೆಂದು ಹೇಳಿದರು. ಒಂದೇ ಸಲ ಅದನ್ನು ಮಾಡಬೇಕೆಂದು ಮಾಡಿದ್ದಾರೆ, ಅದು ಆಗುತ್ತದೆ.

ಬೀದರ್ ಮತ್ತು ಭಾಲ್ಕಿ ತಾಲ್ಲೂಕಿಗೆ ರಸ್ತೆಗಳ ನಿರ್ವಹಣೆಗಾಗಿ ಒದಗಿಸಲಾದ ಹಣ

151 (1924) ಶ್ರೀ ಪ್ರಕಾಶ್ ಖಂಡ್ರೆ (ಭಾಲ್ಕಿ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿರುವ ರಸ್ತೆಗಳ ನಿರ್ವಹಣೆಗಾಗಿ ಈ ವರ್ಷ ಲೋಕೋಪಯೋಗಿ ಇಲಾಖೆಯಿಂದ ಒದಗಿಸಿರುವ ಅನುದಾನವೆಷ್ಟು?

ಆ) ಈ ಅನುದಾನದಲ್ಲಿ ಬೀದರ್ ಜಿಲ್ಲೆ ಮತ್ತು ಭಾಲ್ಕಿ ತಾಲ್ಲೂಕಿಗೆ ಎಷ್ಟು ಹಣವನ್ನು ನಿಗಧಿಪಡಿಸಲಾಗಿದೆ ಮತ್ತು ಎಷ್ಟು ಕಿ.ಮೀ. ರಸ್ತೆಗಳನ್ನು ಗುರುತಿಸಲಾಗಿದೆ?

ಶ್ರೀ ಧರ್ಮಸಿಂಗ್ (ಲೋಕೋಪಯೋಗಿ ಸಚಿವರು):

ಅ) ರಾಜ್ಯದಲ್ಲಿರುವ ರಸ್ತೆಗಳ ನಿರ್ವಹಣೆಗಾಗಿ ಈ ವರ್ಷ ಲೋಕೋಪಯೋಗಿ ಇಲಾಖೆಗೆ ಲೆಕ್ಕ ಶೀರ್ಷಿಕೆ 3054 ರಸ್ತೆ ಮತ್ತು ಸೇತುವೆ (ಯೋಜನೇತರ) ಅಡಿಯಲ್ಲಿ ರಸ್ತೆಗಳ ನಿರ್ವಹಣೆಗಾಗಿ ರೂ. 8737.77 ಲಕ್ಷ ಅನುದಾನ ಒದಗಿಸಲಾಗಿದೆ.

ಆ) ಬೀದರ್ ಜಿಲ್ಲೆಗೆ ಲೆಕ್ಕ ಶೀರ್ಷಿಕೆ 3054 ರಸ್ತೆ ಮತ್ತು ಸೇತುವೆ (ಯೋಜನೇತರ) ಅಡಿ ರೂ. 260.00 ಲಕ್ಷ ಅನುದಾನ ನಿಗದಿಪಡಿಸಲಾಗಿದೆ. ಅದರಲ್ಲಿ ಭಾಲ್ಕಿ ತಾಲ್ಲೂಕಿಗೆ ರೂ. 49.30 ಲಕ್ಷ ಹಣ ನಿಗದಿಪಡಿಸಲಾಗಿದೆ. ಹಾಗೂ 163.30 ಕಿ.ಮೀ ಉದ್ದ ರಸ್ತೆಯನ್ನು ನಿರ್ವಹಣೆಗಾಗಿ ಗುರುತಿಸಲಾಗಿದೆ.

ಅಧ್ಯಕ್ಷರು:- ಮಾನ್ಯ ಪ್ರಕಾಶ್ ಖಂಡ್ರೆಯವರೆ ತಮ್ಮ ಪ್ರಶ್ನೆಯನ್ನು ಮುಂದಿನ ವಾರ ತೆಗೆದುಕೊಳ್ಳೋಣ.

ಶ್ರೀ ಪ್ರಕಾಶ್ ಖಂಡ್ರೆ:- ಮಾನ್ಯ ಅಧ್ಯಕ್ಷರೆ, ಮುಂದಿನ ವಾರವೇ ತೆಗೆದುಕೊಳ್ಳಿ ಆದರೆ ಒಂದೇ ಒಂದು ಜನರಲ್ ಪ್ರಶ್ನೆಯನ್ನು ಕೇಳುತ್ತೇನೆ.

ಅಧ್ಯಕ್ಷರು:- ಆ ರೀತಿ ಎರಡು ಸಲ ತೆಗೆದುಕೊಳ್ಳಲು ಆಗುವುದಿಲ್ಲ. ತೆಗೆದುಕೊಳ್ಳುವುದಿದ್ದರೆ ಈಗ ತೆಗೆದುಕೊಳ್ಳಬೇಕು. ಇಲ್ಲದಿದ್ದರೆ ಆಮೇಲೆ ತೆಗೆದುಕೊಳ್ಳಬೇಕು.

ಶ್ರೀ ಪ್ರಕಾಶ್ ಖಂಡ್ರೆ:- ಇದಕ್ಕೆ ಸಂಬಂಧಪಟ್ಟ ಹಾಗೆ, ಒಂದೇ ಒಂದು ವಿಚಾರವನ್ನು ಸದನದ ಗಮನಕ್ಕೆ ತರಬೇಕಾಗಿದೆ. ನನ್ನ ಬೀದರ್ ಕ್ಷೇತ್ರದಲ್ಲಿ ನಡೆಯಲು ಆಗದಂಥ ಪರಿಸ್ಥಿತಿಯಲ್ಲಿ ರಸ್ತೆಗಳು ಇದೆ. ಒಂದೇ ಒಂದು ಡಬ್ಬಿ ಆಸ್‌ಪಾಲ್ಟ್‌ನ್ನು ಕೊಂಡುಕೊಂಡು ಇವರು ಕೆಲಸ ಮಾಡಿಲ್ಲ. ಹೀಗಾದರೆ ನಮ್ಮ ರಾಜ್ಯದ, ಕ್ಷೇತ್ರದ ರಸ್ತೆಗಳು ಹೇಗೆ ಉಳಿಯುತ್ತವೆ? ಹೊಸ ರಸ್ತೆಗಳನ್ನಂತೂ ಮಾಡಲು ಸಾಧ್ಯವಿಲ್ಲ. ಇರತಕ್ಕ ರಸ್ತೆಗಳನ್ನು ಸರಿಯಾಗಿ ಮೇಂಟೆನೆನ್ಸ್ ಮಾಡಿಕೊಂಡು ಹೋದರೆ ಉಳಿಯುತ್ತದೆ. ಈ ವಿಚಾರಗಳನ್ನು ಸದನದ ಗಮನಕ್ಕೆ ತರುತ್ತಿದ್ದೇನೆ.

ಶ್ರೀ ಧರ್ಮಸಿಂಗ್:- ಇದಕ್ಕೆ ಅವಕಾಶವನ್ನು ಕೊಟ್ಟರೆ ಪೂರ್ಣವಾಗಿ ಉತ್ತರವನ್ನು ಕೊಡುತ್ತೇನೆ.